ಶಾರದಮ್ಮಗೆ ಕೊನೆಗೆ ಏನು ತೋಚಿತೋ 'ಒಂದು ಸಾವಿರ ಕೊಡೋಣ' ಎಂದರು. ಆದರೆ ಅಷ್ಟಕ್ಕೆ ಒಪ್ಪದಿದ್ದರೆ?

ಕೊನೆಗೆ ಅವನನ್ನೇ ಕೇಳುವ ನಿರ್ಧಾರಕ್ಕೆ ಅವರು ಬಂದರು. ಆದರೆ ಅವನು ಕೇಳಿದ್ದು ಅವರಿಗೆ ದಿಗ್ಭ್ರಮೆ ಮೂಡಿಸಿತ್ತು.

'ಇದು ಪ್ರಾಣ ಉಳಿಸೋ ಕೆಲಸ. ಇಷ್ಟು ಕೊಡಿ ಎಂದು ಕೇಳಿದರೆ ಖುದಾ ಮೆಚ್ಚುತಾನಾ? ನಿಮಗೆ ತಿಳಿದಷ್ಟು ಕೊಡಿ, ಅಷ್ಟು ಸಾಕು ಸಾಬ್' ಎಂದ.

ಈಗ ಯಾರಿಗೂ ಮಾತೇ ಹೊರಡಲಿಲ್ಲ. ಏನು ಇವನ ದೊಡ್ಡತನ! ರಾಯರಿಗೆ ಏನು ಅನ್ನಿಸಿತೋ ಸಾವಿರಕ್ಕೆ ಇನ್ನೂ ಐದು ನೂರು ಸೇರಿಸಿ ತಗೋ ಎಂದರು. ಅವನು ಸಂತೋಷದಿಂದ ಅದನ್ನು ಕಣ್ಣಿಗೆ ಒತ್ತಿಕೊಂಡು ಜೇಬಲ್ಲಿ ಇಟ್ಟುಕೊಂಡಿದ್ದ ರೀತಿ ಅವನ ಸಂತೃಪ್ತಿ ಮತ್ತು ಕೃತಜ್ಞತೆಯ ದ್ಯೋತಕವಾಗಿತ್ತು.

ಹಾವಿರುವ ಬುಟ್ಟಿಯನ್ನು ಚೀಲದಲ್ಲಿ ಇಟ್ಟುಕೊಂಡು ಅವನು ಇನ್ನೇನು ಹೊರಡಬೇಕು. 'ಈ ಹಾವು ತಗಂಡು ಏನು ಮಾಡುತೀ?' ಎಂದು ಕೇಳಿದರು ಶಾರದಮ್ಮ.

'ಅದನ್ನು ಕಾಡಿನಲ್ಲಿ ಬಿಟ್ಟುಬಿಡುತೀನಿ.'

ಈಗ ಅವರಿಗೆ ಮತ್ತೊಂದು ಭಯಂಕರ ಸಂಶಯ; 'ಮತ್ತೆ ಅದು ಇಲ್ಲಿಗೆ ಬಂದರೆ'. ಕೇಳಿಯೇಬಿಟ್ಟರು.

'ಅದು ಯಾಕ್ರೀ ಬರ್‍ತದಮ್ಮ? ನಾವು ಅದಕ್ಕೆ ತೊಂದರೆ ಕೊಟ್ರೆ ಮಾತ್ರ ಅದು ಬಿಡೋದಿಲ್ಲ. ಇಗೋ ನೋಡಿ ಹೂವಿನ ಹಾರದಂಗೆ ಅದೆ' ಎನ್ನುತ್ತಾ ಹಾವನ್ನು ಮತ್ತೆ ತೆಗೆಯಲು ಪುಟ್ಟಿಗೆ ಕೈಹಾಕಲು ಹೋದ.

'ಬೇಡ ಬೇಡ ತೆಗೀ ಬ್ಯಾಡ' ಎಂದರು ಎಲ್ಲರು.

ಇದೆಲ್ಲವನ್ನು ಆ ಬೀದಿಯಲ್ಲಿದ್ದ ಭಗವಾನ್ ಗಮನಿಸಿದ್ದ. ಹಾವಾಡಿಗ ಹೊರಟಿದ್ದು ನೋಡಿ ತಕ್ಷಣ ಫೋನ್ ಎತ್ತಿಕೊಂಡ.

ಬಂಟವಾಡ ಖುಷಿಯಿಂದ ಹೊರಟಿದ್ದ ಹಾಡನ್ನು ಗುನುಗುತ್ತಿದ್ದ. 'ಇನ್ನೇನು ಮನೆ ಬಂತು ಎಂದಿರುವಾಗ ಜೀಪೊಂದು ಅವನ ಪಕ್ಕ ಗಕ್ಕನೆ ನಿಂತಿತು. ಒಬ್ಬ ಪೊಲೀಸ್ ಇಳಿದು ಅವನ ಕೈ ಹಿಡಿದು 'ಬಾ ಪೋಲೀಸ್ ಸ್ಟೇಶನ್‌ಗೆ' ಎಂದ.

ಬಂಟವಾಡ ಕಕ್ಕಾಬಿಕ್ಕಿ ಆದ.

'ಜೀಪ್ ಹತ್ತು'. ಅವನ ಕೈ ಹಿಡಿದು ಎಳೆದುಕೊಂಡು ಜೀಪ್ ಹತ್ತಿಸಿ ಸ್ಟೇಶನ್‌ಗೆ ಕರೆತಂದು ಸಾಹೇಬರ ಮುಂದೆ ನಿಲ್ಲಿಸಿದರು.

ಈ ಸಾಹೇಬರು ಅಜಾನುಬಾಹು, ದೊಡ್ಡ ದೊಡ್ಡ ಕಣ್ಣುಗಳು. ದಪ್ಪನೆಯ ಮೀಸೆ. ಗಡುಸು ಧ್ವನಿ. ಗದರಿಸುವುದು ಬೇಡ, ಕಣ್ಣು ಬಿಟ್ಟರೆ ನಡುಕ ಹುಟ್ಟಿಸುತ್ತದೆ. ಅವರು ಒಬ್ಬ ಕಟ್ಟುನಿಟ್ಟಿನ ಶಿಸ್ತುಪಾಲನೆಯ ಪ್ರಾಮಾಣಿಕ ಅಧಿಕಾರಿ; ಜಿಂಕೆ ಹಾವು ಮೊದಲಾದ ಪ್ರಾಣಿಗಳ ಚರ್ಮ ದಂಧೆ ನಡೆಸುವ ದ್ರೋಹಿಗಳ ಬಗ್ಗೆ ನಿಗಾ ಇಟ್ಟಿದ್ದರು.

'ನಿನ್ನ ಹೆಸರು?'

'ಬಂಟವಾಡ'

'ಎಲ್ಲಿಗೆ ಹೋಗಿದ್ದೆ' ಸಿಂಹ ಗರ್ಜನೆ.

'ಒಂದು ಮನೆಯೋರು ಹಾವು ಬಂದಿದೆ ಎಂದು ಫೋನ್ ಮಾಡಿದ್ದರು'. ಬಂಟವಾಡನ ತುಟಿ ಅದುರುತ್ತಿದ್ದವು.

'ನೀನು ಹಾವು ಹಿಡಿಯೋನಾ? ಸರಿಯಾಗಿ ಬೊಗಳು. ಬಾಡಕಾವ್' ಎಂದವರೇ ಅವನ ಕಪಾಳಕ್ಕೆ ಒಂದು ಬಿಗಿದರು. ಅವನ ಕಣ್ಣಲ್ಲಿ ದಳ ದಳ ನೀರು ಇಳಿಯಿತು.

'ದೇವರಾಣೆ. ಖುದಾಕ ಕಸಮ್ ಸಾಹೇಬರೇ.'

'ಸುಳ್ಳು ಬೊಗಳಬೇಡ. ಹಲ್ಲು ಉದುರಿಸಿ ಬಿಡತೀನಿ. ಹಾವನ್ನು ಏನು ಮಾಡುತೀ? ಆ ಹಾವನ್ನು ಸಾಯಿಸಿ ಅದರ ಚರ್ಮ ಸುಲಿದು ಮಾರುತೀ ಅಲ್ಲೇನು? ಬೊಗಳು.'

ಅವನಿಗೆ ಏನು ಹೇಳಬೇಕೋ ತೋಚಲಿಲ್ಲ. ಇನ್ನು ಸತ್ಯ ಬಚ್ಚಿ ಇಡುವಂತೆ ಇಲ್ಲ.

'ನಾನು ಒಂದು ಹಾವನ್ನೂ ಸಾಯಿಸಲ್ಲ ಸಾಬ್.'

'ಬೊಗಳು ಈ ಪುಟ್ಟಿಯಲ್ಲಿ ಈಗ ಹಿಡಕೊಂಡು ಬಂದ್ಯಲ್ಲ ಅದೇನು?'

'ಹಾವ್ರೀ ಇಗೋ ನೋಡ್ರೀ' ಎನ್ನುತ್ತ ಪುಟ್ಟಿ ಒಳಗೆ ಕೈ ಇಟುಬವನು ತೆಗೆಯುತ್ತಿದ್ದಂತೆ ಎಂಟು ಅಡಿ ಹಾವು ಬುಸ್ ಎಂದು ಹಡೆ ಎತ್ತುತ್ತಲೇ ಸಿಂಹದಂತ ಇನ್ಸೆಪಕ್ಟರ್ ಹೆದರಿ ದೂರ ಓಡಿದ. ಪೋಲೀಸರಂತೂ ದಿಕ್ಕಾಪಾಲಾದರು.

ಆ ಕಷ್ಟದ ಸ್ಥಿತಿಯಲ್ಲೂ ಬಂಟವಾಡಗೆ ನಗುಬಂತು. 'ಸಾಹೇಬರೇ ನಾನಿದ್ದೇನೆ. ಹೆದರಬೇಡ್ರಿ. ಬರ್‍ರೀ, ಇದು ಏನೂ ಮಾಡೋದಿಲ್ಲ.'

'ಮೊದಲು ಅದನ್ನ ಪುಟ್ಟಿಗೆ ಸೇರಿಸು' ಎಂದು ಕಿರುಚಿದರು ಸಾಹೇಬರು.

ಈಗ ಅವರಿಗೆ ಒಂದು ಆಶ್ಚರ್ಯ. ಈ ಮನುಷ್ಯ ಸ್ವಲ್ಪವೂ ಅಳುಕದೆ ಅಂಜದೆ ಪುಟ್ಟಿಗೆ ಕೈ ಹಾಕಿ ಹಾವನ್ನು ಹೊರತೆಗೆದದ್ದು ಮತ್ತು ಅಂತಹದೇ ನಿರ್ಭೀತಿಯಿಂದ ಕೈಲಿ ಹಿಡಿದುಕೊಂಡು ನಂತರ ತನ್ನ ಆದೇಶದ ಮೇರೆಗೆ ಅದನ್ನು ಪುಟ್ಟಿ ಸೇರಿಸಿದ್ದು. ಹಾವಾಡಿಗನ ಧೈರ್ಯದ ಬಗ್ಗೆ ಆಶ್ಚರ್ಯ ಮೂಡಿಸಿತ್ತು. ಸ್ವಲ್ಪ ಕೂಲಾಗಿ ಕೇಳಿದರು.

'ಹಾವುಗಳನ್ನು ಕೊಂದು ಅವುಗಳ ಚರ್ಮವನ್ನು ಮಾರುತೀಯಲ್ಲ. ಅವರು ಯಾರು? ಆ ದ್ರೋಹಿಗಳನ್ನು ಹಿಡಿದುಕೊಟ್ಟರೆ ಸರ್ಕಾರದಿಂದ ನಿನಗೆ ಬಹುಮಾನ ಕೊಡಿಸುತ್ತೇನೆ.'

'ಇಲ್ಲ ಸಾಹೇಬರೇ. ನಾನು ಹಾವುಗಳನ್ನು ಕೊಲ್ಲುವುದೂ ಇಲ್ಲ, ಮಾರುವುದೂ ಇಲ್ಲ. ದೇವರಾಣೆ ಸ್ವಾಮೀ' ಎಂದ ದೈನ್ಯದಿಂದ.

'ಹಾಗಾದರೆ ಈ ಹಿಡಿದ ಹಾವನ್ನು ಏನು ಮಾಡುತೀ?'

ಬಂಟವಾಡ ಪೋಲಿಸರನ್ನು ನೋಡಿ 'ಸರ್ ಇವರನ್ನು ಹೊರಗೆ ಕಳಿಸಿ, ಗುಟ್ಟಿನ ಮಾತು' ಎಂದ ಪೇದೆಗಳು ತಕ್ಷಣ ಜಾಗ ಖಾಲಿ ಮಾಡಿದರು.

'ಈಗ ಹೇಳು.'

'ಸ್ವಾಮಿ ಇದು ಸಾಕಿದ ಹಾವು. ನಾನು ಹಾವಾಡಿಗ, ಇದೇ ನನ್ನ ದೇವರು.'

'ಅಂದರೆ ಆ ಮನೆಯಲ್ಲಿ ಹಿಡಿದ ಹಾವು ಎಲ್ಲಿ?'

'ಯಾವ ಹಾವನ್ನೂ ನಾನು ಹಿಡಿದಿಲ್ಲ.'

ಮತ್ತೆ ಸಾಹೇಬರಿಗೆ ಸಿಟ್ಟು ಬುಗಲ್ ಎಂದಿತ್ತು – 'ಈಗ ಅಲ್ಲಿ ಏನು ಮಾಡಿದೆ?'

'ನಾನು ಬುಟ್ಟಿಯಲ್ಲಿದ್ದ ಸಾಕಿದ ಹಾವನ್ನೇ ಈಗ ಹಿಡಿದ ಹಾವು ಎಂದು ತೋರಿಸಿದೆ.'

'ಮೋಸಗಾರ' ಎನ್ನುತ್ತ ಕಪಾಳಕ್ಕೆ ಬಾರಿಸಿ, 'ಈಗಲೇ ನಿನ್ನ ಜೈಲಿಗೆ ದಬ್ಬುತೀನಿ' ಎಂದರು.

ಈಗ ಬಂಟವಾಡ ಅತ್ಯಂತ ಶಾಂತಚಿತ್ತದಿಂದ ನುಡಿದ. 'ಸಾಹೇಬರೇ, ಮನೆಯವರು ಹಾವನ್ನು ಕಂಡು ಹೌಹಾರಿ ಹೋಗಿದ್ದರು. ಅವರ ತಳಮಳ ನೋಡಬೇಕಿತ್ತು. ಅದು ಅವಿತುಕೊಂಡು ಯಾವ ಸಮಯದಲ್ಲಿ ಹೇಗೋ, ಎಂಬ ಭಯದಿಂದ ಕುದ್ದು ಕುದ್ದು ಸಾಯುತ್ತಿದ್ದರು. ಹಾವು ಎಂದರೆ ಎಷ್ಟು ಭಯ ಗೊತ್ತಲ್ಲ. ಈಗ ನೀವೇ ನೋಡಿ ಹಾವನ್ನು ನೋಡಿ ಜಲ ಜಲ ಬೆವತು ಹ್ಯಾಗೆ ಹೊರಗೆ ಓಡಿದಿರಿ.'

ಸಾಹೇಬರಿಗೆ ನಾಚಿಕೆಯಿಂದ ಸಿಟ್ಟು ಬಂತು. ಮತ್ತಷ್ಟೂ ಕುತುಹಲ ಮೂಡಿತ್ತು.

'ಹಾವು ಹಿಡಿದೆ ಎಂದು ಈ ಹಾವು ತೋರಿಸಿದೆ. ಆಗ ಅವರ ಮಾರಿ ನೋಡಬೇಕಿತ್ತು. ದಿಲ್‌ಖುಷ್ ನಾನೇನೂ ಒಂದು ಪೈಸಾ ಕೇಳಲಿಲ್ಲ. ತಿಳಿದಷ್ಟು ಕೊಡಿ ಎಂದೆ. ನೋಡಿ ಇಷ್ಟು ಕೊಟ್ಟಾರೆ ಅಂದರೆ ಎಷ್ಟು ಸಂತೋಷ ಆಗಿರಬೇಡ. ಅಲ್ಲ ಸಾಬ್, ಹಾವು ಇಲ್ಲದ ಜಾಗ ಎಲ್ಲದೆ. ಅದು ನಮ್ಮ ಕಣ್ಣಿಗೆ ಕಾಣೋದಿಲ್ಲ ಕಣ್ಣಿಗೆ ಬಿದ್ದಾಗ ಮಾತ್ರ ಜನಕ್ಕೆ ಭಯ.'

'ಈಗ ಹಾವು ಇಲ್ಲ ಅಂತ ಎಚ್ಚರ ತಪ್ಪಿ ಓಡಾಡುತಾ ಅಕಸ್ಮಾತ್ ಅದು ಅಲ್ಲೇ ಇದ್ದು ಕಚ್ಚಿದರೆ?'

'ಸ್ವಾಮೀ ನಮಗಿಂತಲೂ ಹಾವಿಗೆ ನಮ್ಮನ್ನ ಕಂಡರೆ ಭಯ. ಅದು ಜನ ನೋಡಿ ಹೆದರಿಹೋಗಿರತದೆ. ಕ್ಷಣಮಾತ್ರದಲ್ಲಿ ಅದು ಸರ ಸರ ಅಂತ ಒಂದು ಸಂದಿನಾಗ ಹೋಗಿ ತಪ್ಪಿಸಿಕೊಳ್ಳುತ್ತದೆ.'

ಸಾಹೇಬರಿಗೆ ಅವನು ಮೆಚ್ಚಿಗೆಯಾದ.

'ಬಂಟವಾಡ, ನಡಿ ನಮ್ಮ ಪೋಲೀಸ್ ಜೀಪಿನಲ್ಲಿ ನಿನ್ನ ಮನೆವರೆಗೂ ಬಿಟ್ಟುಬರುತಾರೆ.'

'ಪೋಲೀಸ್ ವ್ಯಾನಾ? ಬೇಡ ಸ್ವಾಮೀ, ಜನ ನನ್ನ ಕಳ್ಳ ಅಂದುಕೊಂಡು ಬಿಡುತಾರೆ. ಅಂಗೆ ಹೋಗುತೀನಿ ಸಾಹೇಬರೇ, ನಾನು ಹಾವು ಹಿಡಿಯೋ ಗುಟ್ಟು ಬಿಟ್ಟುಕೊಟ್ಟೆ. ಇದನ್ನು ಪಬ್ಲಿಕ್ ಮಾಡಿದರೆ ನನಗೆ ಒಂದು ಹಿಡಿ ಅನ್ನ ಹುಟ್ಟಲ್ಲ. ಯಾರಿಗೂ ಹೇಳಬೇಡ್ರಿ' ಎಂದು ಕೈಮುಗಿದು ಪುಟ್ಟಿ ಎತ್ತಿಕೊಂಡು ಹೊರಟ.

ಅಭಿಮಾನದಿಂದ ಮೆಚ್ಚುಗೆಯಿಂದ ಸಾಹೇಬರು ನೋಡುತ್ತಾ ನಿಂತರು.